**ದಿನಾಂಕ 17.09.2025** **ಸಿಸಿ 2801/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ** **ಡಿಡಬ್ಲ್ಯೂ-1**

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದಃ**

ನಾನು ಇದೇ ನ್ಯಾಯಾಲಯದಲ್ಲಿ ಪಿರ್ಯಾದುದಾರರ ವಿರುದ್ಧ ಪಿ ಸಿ ಆರ್ 39/2022 ರಂತೆ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದೂರಿನಲ್ಲಿ ದಿನಾಂಕ 06.09.2022 ರಂದು ಪಿರ್ಯಾದುದಾರರು ನನ್ನ ಮನೆಗೆ ಬಂದು ತಾನು ಕೆನರಾ ಬ್ಯಾಂಕ್ ನಲ್ಲಿ ಸಾಲಪಡೆದುಕೊಳ್ಳಲು ನನ್ನನ್ನು ಜಮೀನುದಾರನಾಗಿ ಕರೆದಿರುತ್ತಾರೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದುದಾರರು ನನಗೆ ಸಾಲ ಕೊಡಿಸುತ್ತೇನೆ....... ಪಡೆದುಕೊಂಡಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಈ ಮೇಲಿನ ಎರಡು ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ ಇದೆ ಎಂದರೆ ಸಾಕ್ಷಿಯು ಎರಡೂ ಹೇಳಿಕೆಗಳು ಸರಿ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೂ. 200/- ಬಾಂಡ್ ಪೇಪರ್ ಎಂದರೆ ನಿಪಿ 9 ಎಂದರೆ ಸರಿ. ಸಾಮಾನ್ಯವಾಗಿ ಬಾಂಡ್ ಪೇಪರ್ ನ್ನು ಬರೆದುಕೊಡುವವರು 1 ನೇ ಪಾರ್ಟಿಯಾಗಿ ಮತ್ತು ಯಾರಿಗೆ ಬರೆದುಕೊತ್ತಿವ್ರೋ ಅವರು 2 ನೇ ಪಾರ್ಟಿ ಆಗಿ ಇರುತ್ತಾರೆ ಎಂದರೆ ಸರಿ. ನಿಪಿ 9 ರಲ್ಲಿ 1 ನೇ ಪಾರ್ಟಿಯಾಗಿ ನನ್ನ ಹೆಸರು ಮತ್ತು 2 ನೇ ಪಾರ್ಟಿಯಾಗಿ ಪಿರ್ಯಾದಿದಾರರ ಹೆಸರು ನಮೂದು ಇದೆ ಎಂದರೆ ಸರಿ. ನಾನು ಬ್ಯಾಂಕಿಗೆ ಸ್ಟಾಪ್ ಪೇಮೆಂಟ್ ಮಾಡಲು ಅರ್ಜಿ ನೀಡಿದ ದಿನಾಂಕ ತಿಂಗಳು ಮತ್ತು ವರ್ಷ ನನಗೆ ನೆನಪಿಲ್ಲ. ಸದರಿ ಅರ್ಜಿಯನ್ನು ಖಾಸಗಿ ದೂರನ್ನು ಸಲ್ಲಿಸುವ ಪೂರ್ವದಲ್ಲಿ ನೀಡಿರುತ್ತೇನೆ. ಎಷ್ಟು ದಿನಗಳ ಮುಂಚೆ ಎಂದು ನನಗೆ ನೆನಪಿಲ್ಲ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಪಿ ಸಿ ಆರ್ 9/2022 ರಲ್ಲಿ ನಿಪಿ 9 ರಲ್ಲಿ ನಮೂದಿಸಿರುವ ಬೈಕ್ ಕಳ್ಳತನವಾದ ಬಗ್ಗೆ ಉಲ್ಲೇಖ ಮಾಡಲಾಗಿದೆ ಎಂದರೆ ಸರಿ. ನನ್ನ ಮತ್ತು ಪಿರ್ಯಾದುದಾರರ ಅಂಗಡಿಗಳು ಒಂದೇ ಲೈನ್ ನಲ್ಲಿ ಇದ್ದು, ಎರಡು ಮೂರು ಅಂಗಡಿಗಳ ಅಂತರದಲ್ಲಿ ಇದೆ. ನಾನು ಪಿರ್ಯಾದುದಾರರಿಂದ ರೂ.2.50 ಲಕ್ಷ ಗಳನ್ನು ಸಾಲವಾಗಿ ಪಡೆದಿದ್ದು, ಅದರ ಮರುಪಾವತಿಗಾಗಿ ನಿಪಿ 1 ರಂತೆ ಚೆಕ್ ನ್ನು ನೀಡಿದ್ದರೂ ಸಹ ಸದರಿ ಸಾಲದ ಹಣವನ್ನು ಪಿರ್ಯಾದುದಾರರಿಗೆ ಮರುಪಾವತಿ ಮಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ಮೋಸದಿಂದ ಕಬಳಿಸಬೇಕೆಂದು ನಿಪಿ 1 ರಂತೆ ನಿಪಿ 1 ರಂತೆ ಚೆಕ್ ನ್ನು ನೀಡಿ ನಂತರ ನನ್ನ ಖಾತೆಯಿಂದ ಹಣವನ್ನು ಪಿರ್ಯಾದುದಾರಿಗೆ ನಗದೀಕರಣವಾಗಬಾರದು ಎಂದು ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿ ಸ್ಟಾಪೇಜ್ ಆಫ್ ಪೇಮೆಂಟ್ ಎಂದು ಹಿಂಬರಹ ಬರುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪಿರ್ಯಾದುದಾರನು ನಾನು ನೀಡಿದ ಖಾಲಿ ಚೆಕ್‌ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮಎಫ್ ಸಿ ನ್ಯಾಯಾಲಯ, ಹರಿಹರ